# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **798** |
| ಉತ್ತರಿಸಬೇಕಾದ ದಿನಾಂಕ | : | 22.02.2023 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2021-22, 2022-23 ನೇ ಸಾಲಿನಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರಿಗೆ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ; (ವಿವರ ನೀಡುವುದು) | 2021-22 ನೇ ಸಾಲಿನಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಸೂಕ್ಷ್ಮ ಹಾಗೂ ಅತಿ ಸೂಕ್ಷ್ಮ ಸಮುದಾಯದ ಪರಿಶಿಷ್ಟ ಜಾತಿ ಜನಾಂಗಕ್ಕೆ 3008 ಮನೆಗಳು ಹಾಗೂ ಪರಿಶಿಷ್ಟ ಪಂಗಡದ ವರ್ಗದವರಿಗೆ 2305 ಮನೆಗಳು ಒಟ್ಟಾರೆಯಾಗಿ 5313 ಮನೆಗಳನ್ನು ಮಂಜೂರು ಮಾಡಲಾಗಿದೆ.<br><br>ಈ ಮನೆಗಳನ್ನು ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಫಲಾನುಭವಿಗಳನ್ನು ಆಯ್ಕೆಗೊಳಿಸಿ ನಿಗಮದ ವೆಬ್ ಸೈಟ್ ನಲ್ಲಿ ಅಳವಡಿಸಲು ಕ್ರಮ ವಹಿಸಲಾಗುತ್ತಿದೆ. ಈವರೆಗೆ ಸದರಿ ನಿಗಮಗಳಿಂದ 2546 ಫಲಾನುಭವಿಗಳನ್ನು ಆಯ್ಕೆಗೊಳಿಸಿ ಕಾಮಗಾರಿ ಆದೇಶ ನೀಡಲಾಗಿದ್ದು, ಇನ್ನುಳಿದ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಹಾಗೂ ನಿಗಮದ ವೆಬ್‌ಸೈಟ್ ನಲ್ಲಿ ಫಲಾನುಭವಿಗಳ ಮಾಹಿತಿಯನ್ನು ಅಳವಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಆಯ್ಕೆಗೊಳಿಸಲಾದ 2546 ಮನೆಗಳ ಪೈಕಿ 07 ಮನೆಗಳು ಪೂರ್ಣಗೊಂಡಿದ್ದು, 461 ಮನೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ ಹಾಗೂ 2078 ಮನೆಗಳು ಇನ್ನು ಪ್ರಾರಂಭವಾಗಲು ಬಾಕಿ ಇರುತ್ತದೆ. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.<br><br>2022-23 ನೇ ಸಾಲಿನಲ್ಲಿ ಪ.ಜಾತಿ/ ಪ.ಪಂಗಡಗಳ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರಿಗೆ ಮನೆಗಳ ಗುರಿಗಳನ್ನು ರಾಜೀವ್ ಗಾಂಧಿ ವಸತಿ ನಿಗಮದಿಂದ ಮಂಜೂರು ಮಾಡಿರುವುದಿಲ್ಲ. |
| ಆ) | 2022-23 ನೇ ಸಾಲಿನಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರಿಗೆ ವಸತಿ ಯೋಜನೆಗಾಗಿ ಎಷ್ಟು ಹಣ ಮೀಸಲಿಡಲಾಗಿದೆ; ವಿನಿಯೋಗಿಸಿದ ಹಣ ಎಷ್ಟು; (ವಿವರ ನೀಡುವುದು) | 2022-23 ನೇ ಸಾಲಿನಲ್ಲಿ ಕರ್ನಾಟಕ ಪ.ಜಾತಿ / ಪ.ಪಂಗಡ ಅಲೆಮಾರಿ ಅಭಿವೃದ್ಧಿ ನಿಗಮದ ವಸತಿ ಯೋಜನೆಯಡಿ ರೂ.300.00 ಕೋಟಿಗಳನ್ನು ಹಂಚಿಕೆ ಮಾಡಲಾಗಿದ್ದು, ಆರ್ಥಿಕ ಇಲಾಖೆಯು ಸದರಿ ಅನುದಾನವನ್ನು ರಾಜೀವ್ ಗಾಂಧಿ ವಸತಿ ನಿಗಮದ ಯೋಜನೆಯಾದ ಡಾ. ಬಿ.ಆರ್ ಅಂಬೇಡ್ಕರ್ ವಸತಿ ಯೋಜನೆಗೆ ಈಗಾಗಲೇ ಅನುಮೋದಿಸಿ ಬಾಕಿ ಇರುವ ಕಂತುಗಳಿಗೆ ಉಪಯೋಗಿಸುವುದು ಹಾಗೂ ಸಮಾಜ ಕಲ್ಯಾಣ ಇಲಾಖೆಯು ಪ್ರಸ್ತಾಪಿಸಿದ ಫಲಾನುಭವಿಗಳನ್ನು ವಸತಿ ಯೋಜನೆಯಡಿ ಹೊಸದಾಗಿ ಮಂಜೂರು ಮಾಡಿದ 5 ಲಕ್ಷ ಗುರಿಯಲ್ಲಿ ಪರಿಗಣಿಸುವುದು ಎಂದು ತಿಳಿಸಿಲಾಗಿದೆ. |
| ಇ) | ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರಿಗೆ ವಸತಿಗಾಗಿ ಮೀಸಲಿಟ್ಟ | ಪ.ಜಾತಿ / ಪ.ಪಂಗಡ ಅಲೆಮಾರಿ ಅಭಿವೃದ್ಧಿ ನಿಗಮದ ವಸತಿ ಯೋಜನೆಯನ್ನು ರಾಜೀವ್ ಗಾಂಧಿ ವಸತಿ ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, 2022-23 ನೇ ಸಾಲಿನಲ್ಲಿ ಪ.ಜಾತಿ |

| | | |
|---|---|---|
| | ಹಣವನ್ನು ಇತರೆ ಯೋಜನೆಗಳಿಗಾಗಿ ಉಪಯೋಗ ಮಾಡಿರುವುದು ನಿಜವೇ; ಅದಕ್ಕೆ ಕಾರಣವೇನು ? (ವಿವರ ತಿಳಿಸುವುದು) | / ಪ.ಪಂಗಡ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಪತಿಗೆ ವಸತಿಗಾಗಿ 15000 ಮನೆಗಳ ಗುರಿಗಳನ್ನು ನಿಗಧಿಪಡಿಸುವಂತೆ ಪ್ರಸ್ತಾವನೆಯನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು. |

ಸಂಖ್ಯೆ :ವಇ 84 ಹೆಚ್‌ಎಎಂ 2023

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು

LCQ-798 ಅನುಬಂಧ

2021-22ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ/ಅರೆ ಅಲೆಮಾರಿ ಜನಾಂಗದವರಿಗೆ ನೀಡಲಾದ ಮನೆಗಳ ಪ್ರಗತಿ ವಿವರ.

| District | Approved | Completed | Foundation | Lintel | Roof | Total | Unstarted |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| Bagalkot | 88 | 0 | 3 | 0 | 0 | 3 | 85 |
| Ballari | 13 | 0 | 0 | 0 | 0 | 0 | 13 |
| Belagavi | 26 | 0 | 1 | 0 | 0 | 1 | 25 |
| Bengaluru Rural | 38 | 0 | 1 | 0 | 0 | 1 | 37 |
| Bengaluru Urban | 31 | 0 | 0 | 0 | 0 | 0 | 31 |
| Bidar | 26 | 0 | 10 | 0 | 0 | 10 | 16 |
| Chamarajanagar | 7 | 0 | 5 | 0 | 0 | 5 | 2 |
| Chikkaballapur | 143 | 2 | 32 | 2 | 0 | 34 | 107 |
| Chikkamagaluru | 118 | 1 | 6 | 0 | 0 | 6 | 111 |
| Chitradurga | 5 | 0 | 2 | 0 | 0 | 2 | 3 |
| Davanagere | 227 | 0 | 18 | 1 | 0 | 19 | 208 |
| Dharwad | 39 | 0 | 2 | 1 | 0 | 3 | 36 |
| Gadag | 16 | 0 | 3 | 1 | 0 | 4 | 12 |
| Hassan | 169 | 0 | 12 | 1 | 0 | 13 | 156 |
| Haveri | 27 | 0 | 4 | 1 | 0 | 5 | 22 |
| Kodagu | 10 | 0 | 0 | 0 | 0 | 0 | 10 |
| Kolar | 13 | 0 | 1 | 0 | 0 | 1 | 12 |
| Koppal | 333 | 1 | 94 | 24 | 1 | 119 | 213 |
| Mysuru | 254 | 0 | 15 | 1 | 0 | 16 | 238 |
| Raichur | 215 | 0 | 58 | 16 | 1 | 75 | 140 |
| Shivamogga | 116 | 0 | 39 | 1 | 0 | 40 | 76 |
| Tumakuru | 38 | 0 | 1 | 0 | 0 | 1 | 37 |
| Udupi | 4 | 0 | 2 | 0 | 0 | 2 | 2 |
| UttaraKannada | 2 | 0 | 1 | 0 | 0 | 1 | 1 |
| Vijayanagara | 39 | 0 | 0 | 0 | 0 | 0 | 39 |
| Vijayapura | 17 | 0 | 2 | 0 | 0 | 2 | 15 |
| Yadgiri | 532 | 3 | 87 | 9 | 2 | 98 | 431 |
| **Grand Total** | **2546** | 7 | **399** | **58** | 4 | **461** | **2078** |

ವ್ಯವಸ್ಥಾಪಕ ನಿರ್ದೇಶಕರು
ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ
ಪಂಗಡದ ಅಲೆಮಾರಿ ಅಭಿವೃದ್ಧಿ ನಿಗಮ